# ಸಾಮಾಜಿಕ ಜಾಲತಾಣ: ಮಕ್ಕಳ ಬಳಕೆಗೆ ನಿರ್ಬಂಧ ಆಸ್ಟ್ರೇಲಿಯಾ ನಡೆಯಲ್ಲಿ ನಮಗೆ ಪಾಠಗಳಿವೆಯೆ?

**ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ ವ್ಯಸನಕ್ಕೆ ಒಳಗಾಗದಂತೆ ಮಕ್ಕಳನ್ನು ಮತ್ತೆ ಮತ್ತೆ ಎಚ್ಚರಿಸುವ ಕೆಲಸ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಆಸ್ಟ್ರೇಲಿಯಾ ತೆಗೆದುಕೊಂಡಿರುವ ದಿಟ್ಟ ಕ್ರಮದಲ್ಲಿ ಉಳಿದವರಿಗೂ ಪಾಠಗಳು ಇರುವಂತಿದೆ.**

ಸಾಮಾಜಿಕ ಜಾಲತಾಣಗಳ ಗೀಳು ಈಗ ಮಕ್ಕಳಿಗೂ ಅಂಟಿದೆ. ಹತ್ತು–ಹನ್ನೆರಡು ವರ್ಷ ವಯಸ್ಸಿನ ಮಕ್ಕಳು ಫೇಸ್‌ಬುಕ್, ಇನ್‌ಸ್ಟಾಗ್ರಾಂನಂತಹ ವೇದಿಕೆಗಳನ್ನು ವ್ಯಾಪಕವಾಗಿ ಬಳಸುತ್ತಿದ್ದಾರೆ. ಈ ಪ್ರವೃತ್ತಿಗೆ ದೇಶ–ಗಡಿಗಳ ಹಂಗಿಲ್ಲ. ಆದಕಾರಣ, ಸಾಮಾಜಿಕ ಜಾಲತಾಣಗಳು ಮಕ್ಕಳ ಮನಸ್ಸಿನ ಮೇಲೆ ಉಂಟುಮಾಡುವ ಪರಿಣಾಮಗಳ ಬಗ್ಗೆ ಜಗತ್ತಿನಾದ್ಯಂತ ಚರ್ಚೆಗಳು ನಡೆಯುತ್ತಿವೆ ಮತ್ತು ಈ ಕುರಿತು ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಈ ಬೆಳವಣಿಗೆಗಳು ಪೋಷಕರಲ್ಲಿ ಸಹಜವಾಗಿಯೇ ಆತಂಕ ಹೆಚ್ಚುವಂತೆ ಮಾಡಿವೆ.

ಸಾಮಾಜಿಕ ಜಾಲತಾಣಗಳನ್ನು ಅತಿಯಾಗಿ ಬಳಕೆ ಮಾಡುವುದರಿಂದ ಮಕ್ಕಳ ಸಹಜ ಬೆಳವಣಿಗೆಗೆ ಅಡ್ಡಿ ಉಂಟಾಗಬಹುದು. ಚಿಕ್ಕ ವಯಸ್ಸಿಗೇ ಆನ್‌ಲೈನ್ ಪ್ರಪಂಚಕ್ಕೆ ತೆರೆದುಕೊಳ್ಳುವ ಮಕ್ಕಳಲ್ಲಿ ಭಾವನಾತ್ಮಕ ಗೊಂದಲಗಳು ಹೆಚ್ಚಬಹುದು ಎಂಬುದು ತಜ್ಞರ ಅಭಿಪ್ರಾಯ. ಆತಂಕ, ಖಿನ್ನತೆ, ನಿದ್ರಾಹೀನತೆಯಂತಹ ಸಮಸ್ಯೆಗಳನ್ನು ಸಹ ಅದು ಸೃಷ್ಟಿಸಬಹುದು ಎಂದು ಪರಿಣತರು ಎಚ್ಚರಿಸಿದ್ದಾರೆ. ಸಾಮಾಜಿಕ ಜಾಲತಾಣಗಳ ಸಮರ್ಪಕ ಬಳಕೆ ಕುರಿತು ಮಕ್ಕಳಿಗೆ ಸರಿಯಾದ ತಿಳಿವಳಿಕೆ ಇರುವುದಿಲ್ಲ. ಅಪರಿಚಿತರಿಗೆ ವೈಯಕ್ತಿಕ ಮಾಹಿತಿ ಮತ್ತು ಫೋಟೊಗಳು ಸಿಗುವಂತೆ ಮಾಡುತ್ತಿದ್ದಾರೆ. ಇದರಿಂದಾಗಿ ಶೋಷಣೆ ಹಾಗೂ ಅಪಾಯಕ್ಕೆ ಸಿಲುಕುವ ಸಾಧ್ಯತೆಯೂ ಇದೆ ಎಂಬ ಕಳವಳವೂ ಬೇರೆ ಬೇರೆ ನೆಲೆಗಳಿಂದ ವ್ಯಕ್ತವಾಗುತ್ತಿದೆ.

ಇದರ ಪರಿಣಾಮವಾಗಿ ನಿಗ್ರಹದ ಬಗೆಗೂ ಚಿಂತನೆಗಳು ಹರಿದಿವೆ. ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದರ ಮೇಲೆ ನಿರ್ಬಂಧಗಳು, ಮಿತಿಗಳು ಇರಬೇಕು ಎಂಬ ಕೂಗು ದಿನೇ ದಿನೇ ಹೆಚ್ಚು ಬಲ ಪಡೆಯುತ್ತಿದೆ. ನಿಯಂತ್ರಣ ವಿಧಿಸುವುದನ್ನು ಬಹುಪಾಲು ಪೋಷಕರು ಬೆಂಬಲಿಸುತ್ತಾರೆ ಎಂದು ಕೆಲವು ಸಮೀಕ್ಷೆಗಳು ಹೇಳುತ್ತವೆ. ಈ ದಿಸೆಯಲ್ಲಿ ಆಸ್ಟ್ರೇಲಿಯಾ ಈಗ ದೃಢವಾದ ಹೆಜ್ಜೆ ಇರಿಸಿದೆ. 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡುವಂತಿಲ್ಲ ಎಂದು ಆ ದೇಶ ಕಾನೂನು ರೂಪಿಸುವ ಮೂಲಕ ಜಗತ್ತಿನ ಗಮನ ಸೆಳೆದಿದೆ.

ಈ ಬಗೆಯ ಕಾನೂನು ರೂಪಿಸಿದ ಮೊದಲ ದೇಶ ಆಸ್ಟ್ರೇಲಿಯಾ. ಸಾಮಾಜಿಕ ಜಾಲತಾಣಗಳ ಬಳಕೆಯಿಂದ ತೊಂದರೆಗೆ ಒಳಗಾಗಬಹುದಾದವರು ಅಂತಹ ಜಾಲತಾಣಗಳನ್ನು ಬಳಸುವುದರ ಮೇಲೆ ನಿಯಂತ್ರಣಗಳನ್ನು ಹೇರುವ ಹಾಗೂ ಅವರ ಖಾಸಗಿತನವನ್ನು ರಕ್ಷಿಸುವ ಉದ್ದೇಶದ ಕಾನೂನುಗಳು ಅಮೆರಿಕ ಹಾಗೂ ಯುರೋಪಿನಲ್ಲಿ ಜಾರಿಯಲ್ಲಿವೆ. ಆದರೆ, ಸಮಗ್ರವಾದ ಕಾನೂನೊಂದನ್ನು ರೂಪಿಸಿರುವುದು ಇದೇ ಮೊದಲು ಎಂದು ವರದಿಗಳು ಹೇಳುತ್ತವೆ.

ಮಕ್ಕಳ ಸುರಕ್ಷತೆಯನ್ನು ಖಾತರಿಪಡಿಸುವ ಹಾಗೂ ಈ ಸಂಬಂಧ ಸಾಮಾಜಿಕ ಹೊಣೆಗಾರಿಕೆಯನ್ನು ನಿಗದಿಪಡಿಸುವ ಉದ್ದೇಶವನ್ನು ಈ ಕಾನೂನು ಹೊಂದಿದೆ ಎಂದು ಆಸ್ಟ್ರೇಲಿಯಾ ಸರ್ಕಾರ ಹೇಳಿದೆ. 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟಿಕ್‌ಟಾಕ್, ಸ್ನ್ಯಾಪ್‌ಚಾಟ್‌ನಂತಹ ವೇದಿಕೆಗಳನ್ನು ಬಳಕೆ ಮಾಡುವುದನ್ನು ನಿರ್ಬಂಧಿಸುವುದು ಈ ಕಾನೂನಿನ ಪ್ರಮುಖ ಉದ್ದೇಶ. ಆದರೆ, ಶೈಕ್ಷಣಿಕ ಮಾಹಿತಿಯನ್ನು ಹೊಂದಿರುವ ಯೂಟ್ಯೂಬ್‌ನಂತಹ ವೇದಿಕೆಗಳನ್ನು ಬಳಸಲು ಅನುವು ಮಾಡಿಕೊಟ್ಟಿರುವುದು ಗಮನಾರ್ಹ.

ಇದರಿಂದಾಗಿ ಆಸ್ಟ್ರೇಲಿಯಾದಲ್ಲಿ ಇನ್ನು ಮುಂದೆ ಸಾಮಾಜಿಕ ಜಾಲತಾಣಗಳು ಬಳಕೆದಾರರ ವಯಸ್ಸನ್ನು ಪರಿಶೀಲಿಸುವ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಲೋಪಗಳು ಕಂಡುಬಂದರೆ ಸಾಮಾಜಿಕ ಜಾಲತಾಣ ಕಂಪನಿಗಳು ದಂಡ ತೆರಬೇಕಾಗುತ್ತದೆ. ಈ ಅಂಶವು ಆಕ್ಷೇಪಕ್ಕೂ ಕಾರಣವಾಗಿದೆ. ವೈಯಕ್ತಿಕ ದತ್ತಾಂಶಗಳನ್ನು ಆಧರಿಸಿ ಬಳಕೆದಾರನ ವಯಸ್ಸನ್ನು ತಾಳೆ ಮಾಡುವುದರಿಂದಾಗಿ ಖಾಸಗಿತನಕ್ಕೆ ಸಂಬಂಧಿಸಿದ ಕಾನೂನುಗಳ ಉಲ್ಲಂಘನೆ ಆಗಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಈ ಕಾನೂನಿನ ಅನುಷ್ಠಾನವು ತುಸು ಕಷ್ಟದ್ದಾದರೂ ಅಸಾಧ್ಯವೇನೂ ಅಲ್ಲ. ಆದರೆ, ನಿಷೇಧ ಹಾಗೂ ನಿರ್ಬಂಧಗಳ ಪರಿಣಾಮವು ಉದ್ದೇಶವನ್ನು ಈಡೇರಿಸುವುದೇ ಎಂಬ ಪ್ರಶ್ನೆ ಉದ್ಭವಿಸದೇ ಇರದು. ಮಕ್ಕಳು ವಯಸ್ಕರಂತೆ ಬಿಂಬಿಸಿಕೊಂಡು ಖಾತೆ ತೆರೆಯುವ ಸಾಧ್ಯತೆಯೂ ಇರುತ್ತದೆ. ಇದೇನೇ ಇರಲಿ, ಈ ಕಾನೂನು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುತ್ತದೆ ಎಂಬುದನ್ನು ಇತರ ದೇಶಗಳು ಸೂಕ್ಷ್ಮವಾಗಿ ಅವಲೋಕಿಸಬೇಕಾದಂತಹ ಒತ್ತಡದ ಸ್ಥಿತಿ ಎಲ್ಲೆಡೆ ಇದೆ. ಅಲ್ಲಿನ ಅನುಭವಗಳಿಂದ ಪಾಠ ಕಲಿಯುವುದಕ್ಕೆ, ಪರಿಣಾಮಕಾರಿ ಎಂದು ಮನವರಿಕೆಯಾದರೆ ಅದರಲ್ಲಿನ ಅಂಶಗಳನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಚಿಂತಿಸಲು ಬೇರೆ ದೇಶಗಳಿಗೆ ಅವಕಾಶ ಕೂಡ ಕಲ್ಪಿಸಿಕೊಡಲಿದೆ.

ಇಷ್ಟಾಗಿಯೂ ಸಾಮಾಜಿಕ ಜಾಲತಾಣಗಳಿಂದ ಆಗುವ ಅನುಕೂಲಗಳನ್ನು ಕೂಡ ನಾವು ಗಮನದಲ್ಲಿ ಇರಿಸಿಕೊಳ್ಳಬೇಕು ಮತ್ತು ಜಾಲತಾಣಗಳನ್ನು ಹೊಣೆಗಾರಿಕೆಯಿಂದ ಬಳಸುವುದರ ಕುರಿತು ಮಕ್ಕಳಲ್ಲಿ ಅರಿವು ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡಬೇಕು. ಅದು ಮನೆಯಿಂದಲೇ ಶುರುವಾಗಬೇಕು. ಈ ಕೆಲಸಕ್ಕೆ ಶಾಲೆಗಳು ಕೂಡ ಕೈಜೋಡಿಸಬೇಕು.

■ **ಎನ್. ಉದಯಕುಮಾರ್**



ಎಐ ಚಿತ್ರ: ಈಶ್ವರ್